2. ರಾಜ್ಯಾದ್ಯಾಂತ 'ಎ' ಮತ್ತು 'ಬಿ' ವರ್ಗದ ಛಾಪಾ ಕಾಗದ ಮಾರಾಟಗಾರರು ಛಾಪಾ ಕಾಗದಗಳನ್ನು ಮಾರಾಟ ಮಾಡಲು ಇದ್ದ ರೂ. 10,000-00 ಮತ್ತು ರೂ. 5,000-00 ಗಳ ಮಿತಿಯನ್ನು ಅನುಕ್ರಮವಾಗಿ 25,000-00 ಮತ್ತು 15,000 ರೂ. ಗಳವರೆಗೆ ಹೆಚ್ಚಿಸಲಾಗಿದೆ.

3. ಕರ್ನಾಟಕ ರಾಜ್ಯ ನೋಂದಣಿ ಹಾಗೂ ಮುದ್ರಾಂಕ ಇಲಾಖಾ ನೌಕರರ ಸಂಘ ಮತ್ತು ಬೆಂಗಳೂರು ಲೀಗಲ್ ಪ್ರಾಕ್ಟೀಷನರ್ಸ್ ಕೋ–ಆಪರೇಟಿವ್ ಸೊಸೈಟಿ ಇವೆರಡೂ ಸಂಸ್ಥೆಗಳು 1,00,000-00 ರೂ. ಗಳವರೆಗಿನ ಮುದ್ರಾಂಕ ಕಾಗದಗಳನ್ನು ಮಾರಾಟ ಮಾಡಲು ಅವಕಾಶವನ್ನು ಕಲ್ಪಿಸಲಾಗಿದೆ.

4. ವಿಶಿಷ್ಟ ಸಂದರ್ಭಗಳಲ್ಲಿ ಕೊರತೆ ಬಿದ್ದ ಮುದ್ರಾಂಕ ಕಾಗದದ ಬದಲಿಗೆ ಚಲನ್ ಮೂಲಕ ಹಣ ಕಟ್ಟಿಸಿಕೊಂಡು ಮುದ್ರಾಂಕ ಕಾಯ್ದೆಯ ಕಲಂ–40ರಡಿಯಲ್ಲಿ ನೋಂದಣಿ ಮಾಡಲು ಅವಕಾಶವಿದೆ.

ವಿಷಯ:- ರೈತರಿಗೆ ರಿಯಾಯಿತಿ ದರದಲ್ಲಿ ಗೊಬ್ಬರ ವಿತರಣೆ.

1429 (1337) **ಶ್ರೀ ಹೆಚ್.ಸಿ. ಬಾಲಕೃಷ್ಣ ಮಾನ್ಯ ಕೃಷಿ ಸಚಿವರು:-** ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

(ಅ) ರಾಜ್ಯಾದ್ಯಾಂತ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ರಿಯಾಯ್ತಿ ದರದಲ್ಲಿ ಗೊಬ್ಬರ ವಿತರಿಸುವ ಯೋಜನೆ ಸರ್ಕಾರದಲ್ಲಿದೆಯೇ, ಹಾಗಿದ್ದಲ್ಲಿ ಎಂದಿನಿಂದ ವಿತರಿಸಲಾಗುವುದು?

(ಆ) ಮಾಗಡಿ ತಾಲ್ಲೂಕು ರೈತರಿಗೆ ವ್ಯವಸಾಯಕ್ಕೆ ಅಗತ್ಯವಾದ ಗೊಬ್ಬರದ ದಾಸ್ತಾನು ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಬಂದಿದ್ದಲ್ಲಿ ಕೊರತೆ ನಿವಾರಿಸಲು ಸರ್ಕಾರದವರು ಕೈಗೊಂಡ ಕ್ರಮಗಳೇನು?

ಶ್ರೀ ಸಿ. ಬೈರೆಗೌಡ (ಕೃಷಿ ಸಚಿವರು):-

(ಅ) ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ರಿಯಾಯಿತಿ ದರದಲ್ಲಿ ರಸಗೊಬ್ಬರ ವಿತರಿಸುವ ಪ್ರತ್ಯೇಕ ಯೋಜನೆ ಸರ್ಕಾರದಲ್ಲಿರುವುದಿಲ್ಲ.

(ಆ) ಮಾಗಡಿ ತಾಲ್ಲೂಕಿನಲ್ಲಿ ರಸಗೊಬ್ಬರಗಳ ಕೊರತೆ ಇರುವ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ. ಆದರೂ ಬೇಡಿಕೆ ಇದ್ದಾಗ ರೈತರಿಗೆ ಅಗತ್ಯವಾದಷ್ಟು ರಸಗೊಬ್ಬರಗಳನ್ನು ಪೂರೈಸಲು ವ್ಯವಸ್ಥೆ ಮಾಡಲಾಗಿದೆ.

ವಿಷಯ:- ಮಾಗಡಿಯಲ್ಲಿರುವ ಶ್ರೀ ಸೋಮೇಶ್ವರ ದೇವಾಲಯವು ಶಿಥಿಲಗೊಳ್ಳುತ್ತಿರುವುದರ ಬಗ್ಗೆ.

1431(1343(ಎ))

ಶ್ರೀ ಹೆಚ್.ಸಿ.ಬಾಲಕೃಷ್ಣ (ಮಾಗಡಿ):- ಮಾನ್ಯ ಮುಜರಾಯಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

(ಅ) ಮಾಗಡಿಯಲ್ಲಿ ಮುಜರಾಯಿ ಇಲಾಖೆ ವ್ಯಾಪ್ತಿಯ ಶ್ರೀ ಸೋಮೇಶ್ವರ ದೇವಾಲಯವು ಶಿಥಿಲಗೊಳ್ಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

(ಆ) ಈ ದೇವಾಲಯದ ಪುನರುಜ್ಜೀವನಕ್ಕೆ ಸರ್ಕಾರದವರು ಕೈಗೊಂಡ ಕ್ರಮಗಳೇನು?

ಶ್ರೀ ಬಿ. ಮುನಿಯಪ್ಪ ಮುದ್ದಪ್ಪ (ಮುಜರಾಯಿ ರಾಜ್ಯ ಸಚಿವರು):-

(ಅ) –ಹೌದು–

(ಆ) ಸರ್ಕಾರದ ಆದೇಶ ನಂ. ಕಂಇ.28.ಮುಇವಿ.95 ದಿನಾಂಕ: 10-11-1995 ರಲ್ಲಿ ರೂ. 3.00 ಲಕ್ಷ ಮಂಜೂರು ಮಾಡಲಾಗಿದೆ ಮತ್ತು ದಿನಾಂಕ: 11-12-95ರಂದು ಹಣವನ್ನು ಬಿಡುಗಡೆ ಮಾಡಲಾಗಿದೆ. ಇದರೊಂದಿಗೆ ಜೀರ್ಣೋದ್ಧಾರ ಸಮಿತಿಯು ಸಾರ್ವಜನಿಕ ವಂತಿಗೆ ಸಂಗ್ರಹ ಮಾಡಿ ಕಾಮಗಾರಿಯನ್ನು ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ವಿಷಯ:- ಮಾಗಡಿ ತಾಲ್ಲೂಕಿನಲ್ಲಿ ಅಂಗನವಾಡಿ ಕೇಂದ್ರಗಳಿಗೆ ಸ್ವಂತ ಕಟ್ಟಡ ಒದಗಿಸುವುದು.

1432 (1341) **ಶ್ರೀ ಹೆಚ್.ಸಿ. ಬಾಲಕೃಷ್ಣ (ಮಾಗಡಿ):-** ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ರಾಜ್ಯ ಸಚಿವರು ಆ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

(ಅ) ಮಾಗಡಿ ತಾಲ್ಲೂಕುಗಳಲ್ಲಿ ಹಲವಾರು ಅಂಗನವಾಡಿ ಕೇಂದ್ರಗಳಿಗೆ ಕಟ್ಟಡಗಳಿಲ್ಲದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

(ಆ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀಮತಿ ವಿಮಲಬಾಯಿ ದೇಶ್‌ಮುಖ್ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ರಾಜ್ಯ ಸಚಿವರು):-

(ಅ) ಹೌದು

(ಆ) ಮಾಗಡಿ ತಾಲ್ಲೂಕಿನಲ್ಲಿ ಐಸಿಡಿಎಸ್ ಯೋಜನೆಯು ಕೇವಲ 2 ವರ್ಷಗಳ ಹಿಂದೆ ಪ್ರಾರಂಭವಾಗಿದೆ. ರಾಜ್ಯ ಸರ್ಕಾರವು ಪ್ರತಿ ಕಟ್ಟಡಕ್ಕೆ ರೂ. 30,000 ಗಳಂತೆ ಅನುದಾನ ನೀಡುತ್ತಿದ್ದು, ಇದರೊಂದಿಗೆ ಜವಾಹರ್ ರೋಜ್‌ಗಾರ್ ಯೋಜನೆ, ಉದ್ಯೋಗ ಭರವಸೆ ಯೋಜನೆ ಮುಂತಾದ ಯೋಜನೆಗಳಡಿಯಲ್ಲಿನ ಆಯವ್ಯಯವನ್ನು ಉಪಯೋಗಿಸಿಕೊಂಡು ಜಿಲ್ಲಾ ಪಂಚಾಯತ್ ತಾಲ್ಲೂಕು ಪಂಚಾಯತ್‌ಗಳು ಹಂತ ಹಂತವಾಗಿ ಅಂಗನವಾಡಿ ಕಟ್ಟಡಗಳನ್ನು ಕಟ್ಟಲು ಕ್ರಮ ಕೈಗೊಳ್ಳುತ್ತಿವೆ.

1995-96ನೇ ಸಾಲಿನಲ್ಲಿ ಸರ್ಕಾರದ ವತಿಯಿಂದ 6 ಕಟ್ಟಡಗಳು ಜವಾಹರ್‌ರೋಜ್‌ಗಾರ್ ಯೋಜನೆಯಡಿ 30 ಕಟ್ಟಡಗಳು ಮತ್ತು ಉದ್ಯೋಗ ಭರವಸೆ ಯೋಜನೆಯಡಿ 4 ಕಟ್ಟಡಗಳು